aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Business Studies (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Business Studies

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

2026–27ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ – 2

ವಿಷಯ : ವ್ಯವಹಾರ ಅಧ್ಯಯನ (27) | ಗರಿಷ್ಠ ಅಂಕಗಳು : 80

ಸಮಯ : 3.00 ಗಂಟೆಗಳು | ಒಟ್ಟು ಪ್ರಶ್ನೆಗಳ ಸಂಖ್ಯೆ : 45

ಸೂಚನೆಗಳು:

1) ಈ ಪ್ರಶ್ನೆಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನು ಒಳಗೊಂಡಿದೆ.
2) ಭಾಗ–ಎ ನಾಲ್ಕು ವಿಭಾಗಗಳನ್ನು ಒಳಗೊಂಡಿದೆ, I, II, III ಮತ್ತು IV
3) ಉತ್ತರಿಸುವಾಗ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ಬರೆಯಿರಿ.
4) ಸರಿಯಾದ ಮತ್ತು ಪೂರ್ಣ ಉತ್ತರವನ್ನು ಬರೆಯಿರಿ.
5) ಭಾಗ–ಎ ಪ್ರಶ್ನೆಗಳಿಗೆ, ಮೊದಲು ಬರೆದ ಉತ್ತರವನ್ನು ಮಾತ್ರ ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುವುದು.

ಭಾಗ–ಎ

I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ **5×1=5**

1. ಸಂಸ್ಥೆಯೊಂದಿಗೆ ಈ ಪಾಲುದಾರನ ಸಂಬಂಧವು ಸಾರ್ವಜನಿಕರಿಗೆ ತಿಳಿದಿರುವುದಿಲ್ಲ.

ಎ. ಸಕ್ರಿಯ ಪಾಲುದಾರ | ಬಿ. ನಾಮ ಮಾತ್ರ ಪಾಲುದಾರ
ಸಿ. ರಹಸ್ಯ ಪಾಲುದಾರ | ಡಿ. ನಿದ್ರಿಸುವ ಪಾಲುದಾರ

2. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಇನ್ನೊಂದು ಹೆಸರಿನಿಂದಲೂ ಕರೆಯಲಾಗುತ್ತದೆ.

ಎ. ಪ್ಲಾಸ್ಟಿಕ್ ಹಣ | ಬಿ. ಇ–ಹಣ
ಸಿ. ಸ್ಮಾರ್ಟ್ ಹಣ | ಡಿ. ಕಾರ್ಡ್ ಹಣ

3. ಸಾಲಪತ್ರವು ಕೆಳಗಿನದನ್ನು ಪ್ರತಿನಿಧಿಸುತ್ತದೆ.

ಎ. ಹೆಚ್ಚುವರಿ ಬಂಡವಾಳ | ಬಿ. ಖಾಯಂ ಬಂಡವಾಳ
ಸಿ. ಬದಲಾಗುವ ಬಂಡವಾಳ | ಡಿ. ಕಂಪನಿಯ ಸಾಲದ ಬಂಡವಾಳ

4. ಇದು ದೇಶದ ವಿವಿಧ ಭಾಗಗಳಲ್ಲಿನ ವಿವಿಧ ಸ್ಥಳಗಳಲ್ಲಿ ಇರುವ ಹಲವಾರು ಶಾಖೆಗಳ ನೆಟ್ವರ್ಕ್ ಆಗಿದೆ.

ಎ. ಬಹು ಅಂಗಡಿಗಳು | ಬಿ. ಗ್ರಾಹಕರ ಸಹಕಾರಿ ಅಂಗಡಿ
ಸಿ. ಬಾಡಿಗೆ ಖರೀದಿ ವ್ಯವಸ್ಥೆ | ಡಿ. ಇಂಟರ್ನೆಟ್ ಮಾರ್ಕೆಟಿಂಗ್

5. ಸರಕುಗಳನ್ನು ಹಡಗಿಗೆ ಹೇರಿದಾಗ ಹಡಗು ಕಂಪನಿ ನೀಡುವ ರಶೀದಿಯು _____

ಎ. ಹಡಗಿಗೆ ಹೇರಿದ ರಶೀದಿ | ಬಿ. ಭರಾವಣೆ ಪತ್ರ
ಸಿ. ಸರಕು ರಶೀದಿ | ಡಿ. ಚಾರ್ಟರ್ ರಶೀದಿ

II **ಆವರಣದಲ್ಲಿ ನೀಡಿರುವ ಉತ್ತರಗಳಿಂದ ಸೂಕ್ತವಾದವುಗಳನ್ನು ಆಯ್ಕೆ ಮಾಡಿ ಖಾಲಿ ಜಾಗಗಳನ್ನು ಭರ್ತಿ ಮಾಡಿ .**
(ಸಂಚಾರಿ ಚಿಲ್ಲರೆ ವ್ಯಾಪಾರಿ, ಹಡಗಿನ ಕಪ್ತಾನನ ರಶೀದಿ, 10 ಕೋಟಿ, ಆರ್ಥಿಕ, ಇಲಾಖಾ ಉದ್ದಿಮೆಗಳು, 1 ಕೋಟಿ) **5×1=5**

6. _____ ಚಟುವಟಿಕೆಗಳು ಜೀವನೋಪಾಯಗಳಿಸುವ ಚಟುವಟಿಕೆಗಳಾಗಿವೆ.
7. _____ ಸರ್ಕಾರದ ಆದಾಯದ ಮೂಲಗಳಾಗಿವೆ.
8. ಸೂಕ್ಷ್ಮ ಉದ್ದಿಮೆಯೆಂದು ವ್ಯಾಖ್ಯಾನಿಸಲ್ಪಟ್ಟ ಕೈಗಾರಿಕಾ ಘಟಕದ ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲಿನ ಹೂಡಿಕೆಯು _____ ಹೆಚ್ಚಾಗುವಂತಿಲ್ಲ.
9. _____ ನಿಶ್ಚಿತ ಸ್ಥಳವಿಲ್ಲದೆ ಕಡಿಮೆ ಬೆಲೆಯ ಸರಕುಗಳಲ್ಲಿ ವ್ಯವಹರಿಸುವ ಸಂಚಾರಿ ವ್ಯಾಪಾರಿಗಳು.
10. ಹಡಗಿಗೆ ಸರಕುಗಳನ್ನು ತುಂಬಿದ ನಂತರ ಹಡಗಿನ ಕಪ್ತಾನನು _____ ನೀಡುತ್ತಾನೆ.

III **ಹೊಂದಿಸಿ ಬರೆಯಿರಿ** **5×1=5**

11.

ಎ) ಭಾರತೀಯ ಪಾಲುಗಾರಿಕೆ ಕಾಯಿದೆ	i. ಪುರಾತನ ಪ್ರಕಾರದ ಸಾರ್ವಜನಿಕ ಉದ್ದಿಮೆ
ಬಿ) ಇಲಾಖಾ ಉದ್ದಿಮೆಗಳು	ii. ಸ್ವಂತ ಉದ್ಯಮವನ್ನು ಸ್ಥಾಪಿಸುವುದು
ಸಿ) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ	iii. 1932
ಡಿ) ಕಟ್ಟಳೆ ಪತ್ರ	iv. 1912
ಇ) ಉದ್ಯಮಶೀಲತೆ	v. ಭಾರತದ ಕೇಂದ್ರ ಬ್ಯಾಂಕ್
	vi. ಕಂಪನಿ ಮತ್ತು ಸದಸ್ಯರುಗಳ ಮಧ್ಯೆ ಇರುವ ಸಂಬಂಧವನ್ನು ವಿವರಿಸುತ್ತದೆ.

IV ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ **5×1=5**

12. ತಳಿ ಕೈಗಾರಿಕೆಗೆ ಒಂದು ಉದಾಹರಣೆ ಕೊಡಿ.
13. KVP ಅನ್ನು ವಿಸ್ತರಿಸಿ.
14. 'ಸಂಸ್ಥೆಯೊಂದು ಉತ್ತಮ ಗುಣಮಟ್ಟದ ಮತ್ತು ಕಲಬೆರಕೆಯಿಲ್ಲದ ಸರಕು ಮತ್ತು ಸೇವೆಗಳನ್ನು ಒದಗಿಸಬೇಕು' ಎನ್ನುವುದು ಯಾವ ಆಸಕ್ತ ಗುಂಪಿಗೆ ಸಂಬಂಧಿಸಿದ ಹೊಣೆಗಾರಿಕೆಯಾಗಿದೆ?
15. ಕಂಪನಿಗಳು ನೀಡುವ ಶೇರುಗಳ ಒಂದು ವಿಧವನ್ನು ಹೆಸರಿಸಿ.
16. ಸಗಟು ವ್ಯಾಪಾರ ಎಂದರೇನು?

ಭಾಗ–ಬಿ

V ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ತಲಾ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಗೆ ಎರಡು ಅಂಕಗಳು. **6×2=12**

17. ವಾಣಿಜ್ಯ ಎಂದರೇನು?
18. ಸಂಯುಕ್ತ ಬಂಡವಾಳ ಕಂಪನಿಯನ್ನು ವ್ಯಾಖ್ಯಾನಿಸಿ.
19. ಸರ್ಕಾರಿ ಕಂಪನಿಗಳ ಯಾವುದಾದರೂ ಎರಡು ಮಿತಿಗಳನ್ನು ತಿಳಿಸಿ.
20. ಇ–ವ್ಯವಹಾರದ ಯಶಸ್ವಿ ಅನುಷ್ಠಾನಕ್ಕಾಗಿ ಅಗತ್ಯವಿರುವ ಯಾವುದಾದರೂ ಎರಡು ಸಂಪನ್ಮೂಲಗಳನ್ನು ಹೇಳಿ.

21. ಸರ್ಕಾರಕ್ಕೆ ಸಂಬಂಧಿಸಿದಂತೆ ವ್ಯವಹಾರದ ಯಾವುದಾದರೂ ಎರಡು ಹೊಣೆಗಾರಿಕೆಗಳನ್ನು ತಿಳಿಸಿ.
22. ಕಂಪನಿಯ ಸ್ಥಾಪನೆಯಲ್ಲಿರುವ ಯಾವುದಾದರೂ ಎರಡು ಹಂತಗಳನ್ನು ಹೆಸರಿಸಿ.
23. ವ್ಯವಹಾರದ ಹಣಕಾಸು ಎಂದರೇನು?
24. ಗುತ್ತಿಗೆ ಕರಾರಿನಲ್ಲಿರುವ ಭಾಗೀದಾರರು ಯಾರು?
25. ಬೌದ್ಧಿಕ ಆಸ್ತಿಯ ಎರಡು ವಿಧಗಳನ್ನು ತಿಳಿಸಿ.
26. ಇಲಾಖಾ ಮಳಿಗೆಗಳು ಮತ್ತು ಸರಪಳಿ ಮಳಿಗೆಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

ಭಾಗ–ಸಿ

VI ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ತಲಾ 10–12 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 4 ಅಂಕಗಳು. 6×4=24

27. ಹಿಂದೂ ಅವಿಭಕ್ತ ಕುಟುಂಬದ ಅರ್ಥ ನೀಡಿ ಹಾಗೂ ಸಣ್ಣ ಟಿಪ್ಪಣಿ ಬರೆಯಿರಿ.
28. ಸಂಸತ್ತಿನ ವಿಶೇಷ ಕಾಯಿದೆಯ ಮೂಲಕ ಅಸ್ತಿತ್ವಕ್ಕೆ ಬರುವ ಸಾರ್ವಜನಿಕ ವಲಯದ ಉದ್ದಿಮೆಯನ್ನು ಹೆಸರಿಸಿ. ಅದರ ಮೂರು ಲಕ್ಷಣಗಳನ್ನು ವಿವರಿಸಿ.
29. ಬ್ಯಾಂಕಿನ ಗ್ರಾಹಕರಿಗೆ ಇ–ಬ್ಯಾಂಕಿಂಗ್‌ನ ಪ್ರಯೋಜನಗಳನ್ನು ತಿಳಿಸಿ.
30. ಆನ್‌ಲೈನ್ ವಹಿವಾಟಿನಲ್ಲಿ ಪಾವತಿಸುವ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
31. ಸಾಮಾಜಿಕ ಹೊಣೆಗಾರಿಕೆಯ ಪರವಾಗಿರುವ ಯಾವುದಾದರೂ ನಾಲ್ಕು ವಾದಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
32. ಕಂಪನಿಯ ಪ್ರವರ್ತತೆಯ ಹಂತದಲ್ಲಿ ಪ್ರವರ್ತಕರು ಕೈಗೊಳ್ಳುವ ಯಾವುದಾದರೂ ನಾಲ್ಕು ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
33. ಲಘು ಟಿಪ್ಪಣಿ ಬರೆಯಿರಿ.
    ಎ. ಉಳಿಸಿಕೊಂಡ ಗಳಿಕೆಗಳು ಬಿ. ವ್ಯಾಪಾರೀ ಸಾಲ
34. ಸಾಲಪತ್ರಗಳ (Debenture) ಯಾವುದಾದರೂ ಎರಡು ಪ್ರಯೋಜನಗಳು ಮತ್ತು ಎರಡು ದೋಷಗಳನ್ನು ವಿವರಿಸಿ
35. ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಹೋಲಿಸಿದರೆ ಸಣ್ಣ ಪ್ರಮಾಣದ ಕೈಗಾರಿಕೆಗಳು ವಿಶಿಷ್ಟವಾದ ಅನಾನುಕೂಲತೆಯನ್ನು ಹೊಂದಿವೆ. ಮೇಲಿನ ಹೇಳಿಕೆಯ ಬೆಳಕಿನಲ್ಲಿ ಸಣ್ಣ ಉದ್ಯಮಗಳು ಎದುರಿಸುತ್ತಿರುವ ಯಾವುದಾದರೂ ನಾಲ್ಕು ಸಮಸ್ಯೆಗಳನ್ನು ವಿವರಿಸಿ.
36. ಜಂಟಿ ಉದ್ದಿಮೆಗಳ ಯಾವುದಾದರೂ ನಾಲ್ಕು ಅನುಕೂಲಗಳನ್ನು ವಿವರಿಸಿ.

ಭಾಗ–ಡಿ

VII ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ 20–25 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ 8 ಅಂಕಗಳು 3×8=24

37. ವ್ಯವಹಾರದ ವಿವಿಧ ಉದ್ದೇಶಗಳನ್ನು ವಿವರಿಸಿ.
38. ಪಾಲುದಾರಿಕೆ ಎಂದರೇನು? ಪಾಲುದಾರಿಕೆಯ ಲಕ್ಷಣಗಳನ್ನು ವಿವರಿಸಿ.
39. ವಿಮೆಯ ತತ್ವಗಳನ್ನು ವಿವರಿಸಿ.
40. ಚಿಲ್ಲರೆ ವ್ಯಾಪಾರಿ ಯಾರು? ಗ್ರಾಹಕರಿಗೆ ಚಿಲ್ಲರೆ ವ್ಯಾಪಾರಿಗಳ ಸೇವೆಗಳನ್ನು ವಿವರಿಸಿ.
41. ರಫ್ತು ವಹಿವಾಟಿನಲ್ಲಿ ಒಳಗೊಳ್ಳುವ ಕ್ರಮಗಳನ್ನು ಪಟ್ಟಿ ಮಾಡಿ.